1. ಅರಣ್ಯ ವೀಕ್ಷಕನು ರೂ. 20,000 ವನ್ನು ವಾರ್ಷಿಕ 7.5% ಸರಳಬಡ್ಡಿಯಲ್ಲಿ 3 ವರುಷಗಳ ಅವಧಿಗೆ ಠೇವಣಿ ಇರಿಸುತ್ತಾನೆ. 3 ವರುಷಗಳ ನಂತರ ಅವನು ಪಡೆಯುವ ಮೊತ್ತವೆಷ್ಟು?
(A) ರೂ. 22,500 (B) ರೂ. 23,500 (C) ರೂ. 24,500
(D) ರೂ. 25,500 (E) ರೂ. 26,500

2. 12, 15, 20 ರ ಲಘುತ್ತಮ ಸಾಮಾನ್ಯ ಅಪವರ್ತ್ಯ (ಎಲ್.ಸಿ.ಎಂ.) ಎಷ್ಟು?
(A) 60 (B) 30 (C) 24 (D) 15 (E) 240

3. ವೀಕ್ಷಕನು ಅರಣ್ಯ ಕಾಲುದಾರಿಯ 600 ಮೀಟರುಗಳನ್ನು 5 ನಿಮಿಷಗಳಲ್ಲಿ ನಡೆಯುತ್ತಾನೆ. ಕಿ.ಮೀ./ಗಂಟೆಗಳಲ್ಲಿ ಅವನ ನಡಿಗೆಯ ವೇಗ ಎಷ್ಟು?
(A) 3.6 ಕಿ.ಮೀ./ಗಂಟೆ (B) 7.2 ಕಿ.ಮೀ./ಗಂಟೆ
(C) 8.4 ಕಿ.ಮೀ./ಗಂಟೆ (D) 9.6 ಕಿ.ಮೀ./ಗಂಟೆ
(E) 10 ಕಿ.ಮೀ./ಗಂಟೆ

4. 2, 5, 10, 17, 26, _______ ಈ ಅನುಕ್ರಮಿಕೆಯ ಮುಂದಿನ ಸಂಖ್ಯೆಯನ್ನು ಕಂಡುಹಿಡಿಯಿರಿ.
(A) 34 (B) 35 (C) 36 (D) 37 (E) 38

5. $11 \times (13 - 2 \times 5)$ ರ ಫಲಿತಾಂಶ ಎಷ್ಟು?
(A) – 1067 (B) 605 (C) 550 (D) 55 (E) 33

6. $(a + b) = 7$ ಮತ್ತು $(a - b) = 3$ ಆದಲ್ಲಿ, $a \times b$ ಯ ಮೌಲ್ಯ ಎಷ್ಟು?
(A) 2 (B) 4 (C) 6 (D) 8 (E) 10

7. $[(-85)(0) - (-17)(3)]$ ರ ಫಲಿತಾಂಶ ಎಷ್ಟು?
(A) 201 (B) – 136 (C) 136 (D) – 51 (E) 51

8. ಜನವರಿ 15, 2016 ಶುಕ್ರವಾರ ಬರುತ್ತದೆಯೆಂದಾದಲ್ಲಿ, ಮಾರ್ಚ್ 16, 2016 ಯಾವ ದಿನ?
(A) ಸೋಮವಾರ (B) ಮಂಗಳವಾರ (C) ಬುಧವಾರ (D) ಗುರುವಾರ (E) ಶುಕ್ರವಾರ

9. ಒಂದು ಪುಸ್ತಕದಲ್ಲಿ 120 ಪುಟಗಳಿವೆ ಮತ್ತು ಪ್ರತಿಯೊಂದು ಪುಟವು 45 ಸಾಲುಗಳನ್ನು ಹೊಂದಿವೆ. ಒಂದೊಮ್ಮೆ ಪುಟವೊಂದರ 24 ಸಾಲುಗಳಂತೆ ಪುಸ್ತಕವನ್ನು ಮರುಮುದ್ರಿಸಿದಲ್ಲಿ, ಪುಸ್ತಕದಲ್ಲಿರುವ ಪುಟಗಳ ಸಂಖ್ಯೆ ಎಷ್ಟಾಗುತ್ತದೆ?
(A) 150 (B) 175 (C) 200 (D) 225 (E) 250

10. 5 ಪೆನ್‌ಗಳ ಬೆಲೆ ರೂ. 75/-. 8 ಪೆನ್‌ಗಳ ಬೆಲೆ ಎಷ್ಟು?
(A) ರೂ. 80 (B) ರೂ. 90 (C) ರೂ. 100 (D) ರೂ. 110 (E) ರೂ. 120

11. ರಾಮುನು ರೂ. 2,730ಕ್ಕೆ ಪೀಠೋಪಕರಣವನ್ನು ಖರೀದಿಸಿರುತ್ತಾನೆ. ಇದರಲ್ಲಿ 5% ಜಿ.ಎಸ್.ಟಿ. ಸೇರಿದೆ. ಜಿ.ಎಸ್.ಟಿ. ಇಲ್ಲದೆ ಅದರ ಬೆಲೆ ಎಷ್ಟು?
(A) ರೂ. 2,400 (B) ರೂ. 2,450 (C) ರೂ. 2,500 (D) ರೂ. 2,600 (E) ರೂ. 2,650



www.kpscvaani.com
Scanned by CamScanner

12. *Ficus benghalensis* (ಆಲದ ಮರ) ವೃಕ್ಷಜಾತಿಯ ಬೀಜ ಚದುರುವಿಕೆಯಲ್ಲಿ, ಕೆಳಗಿನ ಮಾಧ್ಯಮಗಳಲ್ಲಿ ಯಾವುದು ಪ್ರಧಾನವಾಗಿದೆ ?

(A) ಗಾಳಿ (B) ನೀರು (C) ಕ್ರಿಮಿಕೀಟಗಳು (D) ಪ್ರಾಣಿಗಳು (E) ಪಕ್ಷಿಗಳು

13. ಆಡು ಮತ್ತು ಕುರಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸುಳ್ಳಾಗಿರುತ್ತದೆ ?

(A) ಆರೋಗ್ಯವಂತ ಮತ್ತು ಶಾಂತವಾಗಿದ್ದಾಗ ಕುರಿಯ ಬಾಲ ನೆಟ್ಟಗೆ ನಿಂತರೆ, ಆಡಿನ ಬಾಲ ಕೆಳಕ್ಕೆ ನೇತಾಡುತ್ತದೆ

(B) ಕುರಿಯು ಹುಲ್ಲನ್ನು ತಿನ್ನುವುದಕ್ಕೆ ಆದ್ಯತೆ ನೀಡಿದರೆ, ಆಡು ಪೊದೆಗಳ ಮತ್ತು ಬಳ್ಳಿಗಳ ಹುಲ್ಲನ್ನು ತಿನ್ನಲು ಆದ್ಯತೆ ನೀಡುತ್ತದೆ

(C) ಆಡುಗಳು ಕೋಡುಗಳನ್ನು ಹೊಂದಿದಾಗ, ಕುರಿಗಳು ಹೊಂದಬಹುದಾದ ಕೋಡುಗಳ ತುಲನೆಯಲ್ಲಿ ಅವುಗಳು ಕಡಿಮೆ ಅಗಲದ್ದಾಗಿರುತ್ತವೆ ಮತ್ತು ನೇರವಾಗಿರುತ್ತವೆ

(D) ಕುರಿಗಳು ದೊಡ್ಡ ಗುಂಪುಗಳಲ್ಲಿ ಇರುವುದಕ್ಕೆ ಆದ್ಯತೆ ನೀಡಿದರೆ, ಆಡುಗಳು ಸ್ವತಂತ್ರವಾಗಿ ಅಥವಾ ಸಣ್ಣ ಗುಂಪುಗಳಲ್ಲಿ ಇರುವುದಕ್ಕೆ ಆದ್ಯತೆ ನೀಡುತ್ತವೆ

(E) ಕುರಿಗಳು ತಮ್ಮ ಮೈಮೇಲೆ ಉಣ್ಣೆಯನ್ನು ಹೊಂದಿದರೆ, ಆಡಿನ ದೇಹವು ರೋಮದಿಂದ ಆಚ್ಛಾದಿಸಲ್ಪಟ್ಟಿರುತ್ತದೆ

14. ಕೆಳಗಿನವುಗಳಲ್ಲಿ ಯಾವ ಮರದ ಚೇಗಿನಿಂದ (ಹಾರ್ಟ್‌ವುಡ್) ಕಚ್ ಮತ್ತು ಕಥ ( Cutch ಮತ್ತು Katha) ಹೊರತೆಗೆಯಲಾಗುತ್ತದೆ ?

(A) ಜಾಲಿ (B) ಬೇವು (C) ಕಗ್ಗಳಿ
(D) ಶ್ರೀಗಂಧ (E) ಮುತ್ತುಗ

15. ಯಾವ ಪ್ರಾಣಿಗಳ/ಪಕ್ಷಿಗಳ ಸಂರಕ್ಷಣೆಗಾಗಿ ದಾರೋಜಿ ವನ್ಯಜೀವಿ ಅಭಯಾರಣ್ಯ ಘೋಷಿಸಲ್ಪಟ್ಟಿದೆ ?

(A) ಹುಲಿ (B) ಕೃಷ್ಣಮೃಗ
(C) ಚಿರತೆ (D) ಕರಡಿ
(E) ಹೆಬ್ಬಕ (ಗ್ರೇಟ್ ಇಂಡಿಯನ್ ಬಸ್ಟರ್ಡ್)

16. ಇತ್ತೀಚೆಗೆ ಸಂರಕ್ಷಣಾ ಮೀಸಲು ಎಂದು ಘೋಷಿಸಲ್ಪಟ್ಟಿರುವ 'ಕಪ್ಪಟಗುಡ್ಡ' ಯಾವ ಜಿಲ್ಲೆಯಲ್ಲಿದೆ ?

(A) ಹಾವೇರಿ (B) ವಿಜಯಪುರ (C) ಕೊಪ್ಪಳ
(D) ಶಿವಮೊಗ್ಗ (E) ಗದಗ

17. ಕರ್ನಾಟಕ ಸರಕಾರವು ಈ ಕೆಳಗಿನ ವೃಕ್ಷ ಜಾತಿಗಳಲ್ಲಿ ಯಾವುದು/ಯಾವವುಗಳು ಖಾಸಗಿ ಮತ್ತು ಸರಕಾರಿ ಎರಡೂ ಭೂಮಿಗಳಲ್ಲಿ ಬೆಳೆಸುವುದನ್ನು 2017ರಲ್ಲಿ ನಿಷೇಧಿಸಿದೆ ?

(A) ನೀಲಗಿರಿ ಮತ್ತು ಗಾಳಿ ಮರ

(B) ಗಾಳಿ ಮರ ಮತ್ತು ಅಕೇಶಿಯ ಆರಿಕ್ಯುಲಿಫಾರ್ಮಿಸ್

(C) ಅಕೇಶಿಯ ಆರಿಕ್ಯುಲಿಫಾರ್ಮಿಸ್ ಮತ್ತು ನೀಲಗಿರಿ

(D) ಬಳ್ಳಾರಿ ಜಾಲಿ ಮತ್ತು ನೀಲಗಿರಿ

(E) ನೀಲಗಿರಿ ಮಾತ್ರ



www.kpscvaani.com
Scanned by CamScanner

18. 20 ಮರಗಳ ಸರಾಸರಿ ಎತ್ತರ 29 ಮೀಟರುಗಳು. ಪ್ರತಿಯೊಂದು ಮರವೂ 3 ಮೀಟರು ಹೆಚ್ಚು ಎತ್ತರವಿದ್ದಿದ್ದಲ್ಲಿ, ಸರಾಸರಿ ಎತ್ತರ ಎಷ್ಟಾಗುತ್ತಿತ್ತು ?

(A) 20 ಮೀ. (B) 23 ಮೀ. (C) 29 ಮೀ. (D) 32 ಮೀ. (E) 62 ಮೀ.

19. ಮರಮಟ್ಟು ವ್ಯಾಪಾರಿಯೋರ್ವನು ಕುಶಾಲನಗರ ಸರಕಾರಿ ಮರದ ಡಿಪೋದಿಂದ ರೂ. 28,00,000ಕ್ಕೆ ಸಾಗವಾನಿ ಮರವನ್ನು ಖರೀದಿಸುತ್ತಾನೆ. ಇದರಿಂದ ಪೀಠೋಪಕರಣಗಳನ್ನು ತಯಾರಿಸಲು ಆತನು ಮಜೂರಿಗೆ ರೂ. 2,00,000 ಖರ್ಚು ಮಾಡುತ್ತಾನೆ. ಆತನು ರೂ. 32,00,000ಕ್ಕೆ ಪೀಠೋಪಕರಣವನ್ನು ಮಾರುತ್ತಾನೆ. ಈ ಹೂಡಿಕೆಯಲ್ಲಿ ವ್ಯಾಪಾರಿಗೆ ಆದ ಲಾಭ/ನಷ್ಟದ ಶೇಕಡವಾರು ಎಷ್ಟು ?

(A) 6.66% (B) 13.33% (C) 14.28% (D) 15.33% (E) 17.28%

20. ಸಿಲಿಂಡರಾಕಾರದ ಬೀಟೆ ಮರದ ದಿಮ್ಮಿಯೊಂದರ ಖಂಡ (ಸೆಕ್ಷನ್)ದ ಸುತ್ತಳತೆ 189 ಸೆಂ.ಮೀ. ದಿಮ್ಮಿಯ ವ್ಯಾಸದ ಅತ್ಯಂತ ನಿಕಟ ಅಂದಾಜು ಎಷ್ಟು ಆಗಿರುತ್ತದೆ ? ($\pi = 3.14$ ಬಳಸಿ)

(A) 60.2 ಸೆಂ.ಮೀ. (B) 30.1 ಸೆಂ.ಮೀ. (C) 25.5 ಸೆಂ.ಮೀ. (D) 94.5 ಸೆಂ.ಮೀ. (E) 15.5 ಸೆಂ.ಮೀ.

21. ಚೀಲವೊಂದು ಸಮಪ್ರಮಾಣದಲ್ಲಿ 1 ರೂಪಾಯಿ ನಾಣ್ಯ/ನಾಣ್ಯಗಳು, 50 ಪೈಸೆ ನಾಣ್ಯ/ನಾಣ್ಯಗಳು ಮತ್ತು 25 ಪೈಸೆ ನಾಣ್ಯ/ನಾಣ್ಯಗಳನ್ನು ಹೊಂದಿರುತ್ತದೆ. ಈ ಮೊತ್ತದ ಒಟ್ಟು ಮೌಲ್ಯ ರೂ. 875.00 ಆದಲ್ಲಿ, ಪ್ರತಿಯೊಂದು ವರ್ಗದಲ್ಲಿ ಎಷ್ಟು ನಾಣ್ಯಗಳಿದ್ದವು ?

(A) 500 (B) 550 (C) 600 (D) 650 (E) 700

22. 1521 ರ ವರ್ಗಮೂಲ ಎಷ್ಟು ?

(A) 29 (B) 31 (C) 39 (D) 41 (E) 49

23. $(36^2 - 26^2)$ರ ಮೌಲ್ಯ ಎಷ್ಟು ?

(A) 100 (B) 420 (C) 520 (D) 620 (E) 700

24. ಒಂದು ಹೆಕ್ಟೇರ್ ಪ್ರದೇಶದಲ್ಲಿ 2 ಮೀ. × 2 ಮೀ. ಅಂತರದಲ್ಲಿ ಎಷ್ಟು ಗಿಡಗಳನ್ನು ನೆಡಬಹುದು ?

(A) 1000 (B) 1500 (C) 2500 (D) 4000 (E) 4500

25. ಸಸ್ಯೋದ್ಯಾನ (ನರ್ಸರಿ)ಯಲ್ಲಿ ಸಸಿಗಳನ್ನು ಬೆಳೆಸಲು ತೂಕದಲ್ಲಿ 2:1:1 ಅನುಪಾತದಲ್ಲಿ ಕೆಂಪು ಮಣ್ಣು, ಹೊಲಾಂಗಣ ಗೊಬ್ಬರ (ಫಾರ್ಮ್ ಯಾರ್ಡ್ ಮನ್ಯುಅಲ್ – FYM) ಮತ್ತು ಮರಳಿನ ಕುಂಡದ ಮಿಶ್ರಣ ಬೇಕಾಗುತ್ತದೆ. 1.5 ಮೆಟ್ರಿಕ್ ಟನ್ ಕುಂಡದ ಮಿಶ್ರಣ ತಯಾರಿಸಲು ಬೇಕಾಗುವ ಕೆಂಪು ಮಣ್ಣಿನ ಪ್ರಮಾಣ ಎಷ್ಟು ?

(A) 375 ಕೆ.ಜಿ. (B) 500 ಕೆ.ಜಿ. (C) 750 ಕೆ.ಜಿ. (D) 875 ಕೆ.ಜಿ. (E) 1000 ಕೆ.ಜಿ.

26. ಓರ್ವ ತಂದೆ ಹಾಗೂ ಮಗನ ಸಂದರ್ಭದಲ್ಲಿ ಇಂದು ತಂದೆಯ ಪ್ರಾಯ ಆತನ ಮಗನ ಪ್ರಾಯಕ್ಕಿಂತ ಮೂರು ಪಟ್ಟಾಗಿರುತ್ತದೆ. ಐದು ವರುಷಗಳ ಹಿಂದೆ ತಂದೆಯ ಪ್ರಾಯ ಅವನ ಮಗನ ಪ್ರಾಯಕ್ಕಿಂತ ನಾಲ್ಕು ಪಟ್ಟು ಇದ್ದಿತ್ತು. ಇಂದು ತಂದೆ ಮತ್ತು ಮಗನ ವಯಸ್ಸುಗಳ ಅಂತರವೆಷ್ಟು ?

(A) 40 ವರ್ಷಗಳು (B) 35 ವರ್ಷಗಳು (C) 30 ವರ್ಷಗಳು (D) 25 ವರ್ಷಗಳು (E) 20 ವರ್ಷಗಳು



www.kpscvaani.com

Scanned by CamScanner

27. ಈ ಕೆಳಗಿನ ಕರ್ನಾಟಕದ ಯಾವ ಜಿಲ್ಲೆಯು ಒಂದಕ್ಕಿಂತ ಹೆಚ್ಚು ರಾಜ್ಯದೊಂದಿಗೆ ಗಡಿಯನ್ನು ಹೊಂದಿದೆ ?
(A) ಬಳ್ಳಾರಿ
(B) ರಾಯಚೂರು
(C) ಯಾದಗಿರಿ
(D) ಕೊಡಗು
(E) ದಕ್ಷಿಣ ಕನ್ನಡ

28. ಆನೆದಾಡೆಯು ಕೆಳಗಿನವುಗಳಲ್ಲಿ ಯಾವ ವಿಧದ ಹಲ್ಲುಗಳ ಪರಿವರ್ತಿತ ರೂಪ ಆಗಿರುತ್ತದೆ ?
(A) ಕೋರೆ ಹಲ್ಲು
(B) ದವಡೆ ಮುಂದಿನ ಹಲ್ಲು
(C) ದವಡೆ ಹಲ್ಲು
(D) ಬಾಚಿಹಲ್ಲು
(E) ವಿವೇಕ ದಂತ

29. ಕೆಳಗಿನ ಹೆಜ್ಜೆ ಗುರುತುಗಳನ್ನು ಪರಿಗಣಿಸಿರಿ.

| ಸಂಜ್ಞೆ | ಪ್ರಾಣಿಗಳು |
|---|---|
| I.  | ಹುಲಿ |
| II.  | ತೋಳ |
| III.  | ಕತ್ತೆ ಕಿರುಬ |
| IV.  | ಕರಡಿ (Sloth Bear) |

ಮೇಲಿನವುಗಳಲ್ಲಿ ಯಾವುದು/ ಯಾವುವು ಸರಿಯಾಗಿ ಹೊಂದಿಕೊಳ್ಳುತ್ತದೆ/ತ್ತವೆ ?
(A) I ಮಾತ್ರ
(B) II ಮತ್ತು III ಮಾತ್ರ
(C) I, II ಮತ್ತು III ಮಾತ್ರ
(D) I ಮತ್ತು III ಮಾತ್ರ
(E) I ಮತ್ತು IV ಮಾತ್ರ

30. ಯಾವ ಜಿಲ್ಲೆಯನ್ನು "ಕರ್ನಾಟಕದ ಸಕ್ಕರೆ ಬೋಗುಣಿ" ಎಂದು ಕರೆಯಲಾಗುತ್ತದೆ ?
(A) ಮಂಡ್ಯ
(B) ಬೆಳಗಾವಿ
(C) ಬೀದರ್
(D) ಮೈಸೂರು
(E) ಶಿವಮೊಗ್ಗ

31. ವಿಧಾನಸಭೆಯ ಸದಸ್ಯನಾಗಲು ಒಬ್ಬರು ಎಷ್ಟು ವರುಷಗಳ ವಯಸ್ಸಿನವರಾಗಿರಬೇಕು ?
(A) 21
(B) 25
(C) 30
(D) 18
(E) 28

32. ಪರಿಸರ ಸಂರಕ್ಷಣೆಗಾಗಿ ಸುಪ್ರಸಿದ್ಧ ಅಪ್ಪಿಕೋ ಚಳವಳಿ ಯಾವ ಜಿಲ್ಲೆಯಲ್ಲಿ ಪ್ರಾರಂಭಿಸಲ್ಪಟ್ಟಿತು ?
(A) ಶಿವಮೊಗ್ಗ
(B) ಚಿಕ್ಕಮಗಳೂರು
(C) ಮೈಸೂರು
(D) ಕೊಡಗು
(E) ಉತ್ತರ ಕನ್ನಡ



www.kpscvaani.com
Scanned by CamScanner

33. ಕೆಳಗಿನ ಕರ್ನಾಟಕದ ತಾಲೂಕುಗಳಲ್ಲಿ ಯಾವುದರಲ್ಲಿ ಸಿದ್ಧಿ ಪಂಗಡದ ಜನಸಂಖ್ಯೆ ಅತ್ಯಧಿಕ ಕೇಂದ್ರೀಕೃತವಾಗಿದೆ ?

(A) ಯೆಲ್ಲಾಪುರ (B) ಕೊಳ್ಳೇಗಾಲ (C) ವಿರಾಜಪೇಟೆ

(D) ಗುಂಡ್ಲುಪೇಟೆ (E) ಉಡುಪಿ

34. ಕೆಳಗಿನವುಗಳಲ್ಲಿ, ಯಾವುದು/ಯಾವುವು ಸರಿಯಾಗಿ ಹೊಂದಿಸಲ್ಪಟ್ಟಿದೆ/ಪಟ್ಟಿವೆ ?

| ಜಲಪಾತ | ನದಿ |
|---|---|
| 1. ಜೋಗ ಜಲಪಾತ | ವಾರಾಹಿ |
| 2. ಮಲ್ಲಾಲಿ ಜಲಪಾತ | ಕುಮಾರಧಾರಾ |
| 3. ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತ | ಲಕ್ಷ್ಮಣತೀರ್ಥ |
| 4. ಇರುಪ್ಪು ಜಲಪಾತ | ಕಾವೇರಿ |

ಸರಿಯಾದ ಕೋಡ್‌ಗಳನ್ನು ಬಳಸುವ ಮೂಲಕ ಆಯ್ಕೆ ಮಾಡಿರಿ ಮತ್ತು ಉತ್ತರವನ್ನು ಗುರುತಿಸಿರಿ:

(A) 2 ಮಾತ್ರ

(B) 1 ಮತ್ತು 4 ಮಾತ್ರ

(C) 2 ಮತ್ತು 4 ಮಾತ್ರ

(D) 1, 3 ಮತ್ತು 4 ಮಾತ್ರ

(E) ನಾಲ್ಕು ಹೊಂದಾಣಿಕೆಗಳಲ್ಲಿ ಯಾವುದೂ ಸರಿ ಇಲ್ಲ

35. ಕರ್ನಾಟಕಕ್ಕೆ ಸಂಬಂಧಿಸಿದಂತೆ, ಇವುಗಳನ್ನು ಪರಿಗಣಿಸಿರಿ :

1. ರಾಜ್ಯ ಪಕ್ಷಿ – ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್
2. ರಾಜ್ಯ ಪ್ರಾಣಿ – ಆನೆ (Asian Elephant)
3. ರಾಜ್ಯ ವೃಕ್ಷ – ಆಲದ ಮರ
4. ರಾಜ್ಯ ಚಿಟ್ಟೆ – ಸದರ್ನ್ ಬರ್ಡ್‌ವಿಂಗ್ (Southern Bird Wing)

ಮೇಲಿನವುಗಳಲ್ಲಿ ಯಾವುದು ಸರಿಯಾಗಿದೆ ?

(A) 2 ಮಾತ್ರ (B) 1 ಮತ್ತು 2 ಮಾತ್ರ (C) 2, 3 ಮತ್ತು 4 ಮಾತ್ರ

(D) 2 ಮತ್ತು 4 ಮಾತ್ರ (E) 1, 2 ಮತ್ತು 3 ಮಾತ್ರ

36. ಶ್ರೀಗಂಧದ ಮರಕ್ಕೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ, ಯಾವುದು ಸರಿಯಾಗಿದೆ/ಸರಿಯಾಗಿವೆ ?

I. ಇದೊಂದು ಆಂಶಿಕ ಬೇರಿನ ಪರಾವಲಂಬಿ

II. ಇದು ವರ್ಷಕ್ಕೆರಡು ಬಾರಿ ಫಲ ಧರಿಸುತ್ತದೆ

III. ಇದೊಂದು ಪೂರ್ಣ ಬೇರಿನ ಪರಾವಲಂಬಿ

IV. ಇದರ ಕಾಂಡದ ಎಲ್ಲಾ ಭಾಗಗಳೂ ಸುವಾಸನೆಯುಕ್ತ

V. ಇದರ ಮರವನ್ನು ಅರಣ್ಯ ಇಲಾಖೆ ಮೂಲಕ ಅಥವಾ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಗೆ ಮಾರಬಹುದಾಗಿದೆ

ಕೆಳಗಿನ ಕೋಡ್‌ಗಳನ್ನು ಬಳಸಿ ಸರಿಯಾದ ಹೇಳಿಕೆಗಳನ್ನು ಗುರುತಿಸಿರಿ.

(A) I ಮಾತ್ರ (B) III ಮಾತ್ರ (C) I ಮತ್ತು II ಮಾತ್ರ

(D) III ಮತ್ತು IV ಮಾತ್ರ (E) I, II ಮತ್ತು V ಮಾತ್ರ



www.kpscvaani.com
Scanned by CamScanner

37. ಕೆಳಗಿನ ಪ್ರಾಣಿಗಳಲ್ಲಿ ಯಾವುದರ ಆಕೃತಿಗಳು ರಾಷ್ಟ್ರೀಯ ಲಾಂಛನದಲ್ಲಿ ಕಂಡುಬರುತ್ತವೆ ?
(A) ಬಸವ, ಜಿಂಕೆ ಮತ್ತು ಗರುಡ (ಹದ್ದು)
(B) ಕುದುರೆ ಮತ್ತು ಬಸವ
(C) ಆನೆ, ಹುಲಿ ಮತ್ತು ಬಸವ
(D) ಜಿಂಕೆ ಮತ್ತು ಆನೆ
(E) ಹುಲಿ, ಬಸವ ಮತ್ತು ಕುದುರೆ

38. ಕೆಳಗಿನ ಯಾವ ಮರಗಳ ಎಲೆಗಳನ್ನು ಆಹಾರ ಬಡಿಸಲು ಅಥವಾ ಪಾತ್ರಾವಳಿಗಳನ್ನು ತಯಾರಿಸಲು ಉಪಯೋಗಿಸಲು ಸಾಧ್ಯವಿರುವುದಿಲ್ಲ ?
(A) ಮುತ್ತುಗ
(B) ಆಲ
(C) ಅಡಿಕೆ
(D) ಬಾಳೆ
(E) ಬೇವು

39. ಕೆಳಗಿನವುಗಳಲ್ಲಿ ಅಭಯಾರಣ್ಯ ಮತ್ತು ಜಿಲ್ಲೆಯನ್ನು ಹೊಂದಿಸಿ ಬರೆಯಿರಿ :

| | | |
|---|---|---|
| i. ಚಿಂಚೋಳಿ ವನ್ಯಜೀವಿ ಅಭಯಾರಣ್ಯ | – | 1. ಕೊಡಗು |
| ii. ಕಾವೇರಿ ವನ್ಯಜೀವಿ ಅಭಯಾರಣ್ಯ | – | 2. ಕಲಬುರಗಿ |
| iii. ಬ್ರಹ್ಮಗಿರಿ ವನ್ಯಜೀವಿ ಅಭಯಾರಣ್ಯ | – | 3. ಮಂಡ್ಯ |
| iv. ಗುಡವಿ ಪಕ್ಷಿಧಾಮ | – | 4. ಹಾವೇರಿ |
| | – | 5. ಶಿವಮೊಗ್ಗ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.
(A) i – 4, ii – 1, iii – 3, iv – 2
(B) i – 2, ii – 1, iii – 3, iv – 5
(C) i – 2, ii – 3, iii – 1, iv – 5
(D) i – 4, ii – 3, iii – 5, iv – 2
(E) i – 2, ii – 1, iii – 4, iv – 5

40. ಕೆಳಗಿನವುಗಳಲ್ಲಿ ಯಾವುದು ಕರ್ನಾಟಕದಲ್ಲಿ ಇಲ್ಲ ?
(A) ಶಿರಾಡಿ ಘಾಟ್
(B) ಚಾರ್ಮಾಡಿ ಘಾಟ್
(C) ಆಗುಂಬೆ ಘಾಟ್
(D) ಬಿಸ್ಲೆ ಘಾಟ್
(E) ಕಸಾರ ಘಾಟ್

41. ಕೆಳಗಿನವುಗಳಲ್ಲಿ ಯಾವುದು ಕರ್ನಾಟಕ ಅರಣ್ಯ ವಿಭಾಗದಲ್ಲಿ ಒಂದು ಹುದ್ದೆಯಾಗಿರುವುದಿಲ್ಲ ?
(A) ಅರಣ್ಯ ರಕ್ಷಕ
(B) ಉಪ ವಲಯ ಅರಣ್ಯಾಧಿಕಾರಿ
(C) ವಲಯ ಅರಣ್ಯಾಧಿಕಾರಿ
(D) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
(E) ಉಪ ನಿರ್ದೇಶಕರು ಸಾಮಾಜಿಕ ಅರಣ್ಯ

42. ಕೆಳಗಿನ ಬೆಟ್ಟಗಳಲ್ಲಿ ಯಾವುದರಲ್ಲಿ ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಸಂಗಮಿಸುತ್ತದೆ ?
(A) ಬ್ರಹ್ಮಗಿರಿ ಬೆಟ್ಟ
(B) ಮುಳ್ಳಯ್ಯನಗಿರಿ ಬೆಟ್ಟ
(C) ಕೆಮ್ಮಣ್ಣುಗುಂಡಿ ಬೆಟ್ಟ
(D) ಬಿಳಿಗಿರಿರಂಗನ ಬೆಟ್ಟ
(E) ಕುದುರೆಮುಖ ಬೆಟ್ಟಗಳು



www.kpscvaani.com
Scanned by CamScanner

43. ಪಶ್ಚಿಮದ ಗಂಗ ರಾಜವಂಶದ ರಾಜಧಾನಿ ಯಾವುದಾಗಿತ್ತು ?
(A) ಬನವಾಸಿ (B) ತಲಕಾಡು (C) ಬಾದಾಮಿ
(D) ಹಂಪಿ (E) ಶ್ರೀರಂಗ ಪಟ್ಟಂ

44. ಕೆಳಗಿನ ಒಪ್ಪಂದಗಳಲ್ಲಿ ಯಾವುದರ ಪ್ರಕಾರ ಟಿಪ್ಪು ಸುಲ್ತಾನನು ಆಂಗ್ಲೋ-ಮೈಸೂರು ಕದನದಲ್ಲಿ ತನ್ನ ಅರ್ಧ ರಾಜ್ಯವನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಅದರ ಮಿತ್ರರಿಗೆ ಒಪ್ಪಿಸಿಕೊಡಬೇಕಾಯಿತು ?
(A) ಮಂಗಳೂರು ಒಪ್ಪಂದ (B) ಹೈದರಾಬಾದ್ ಒಪ್ಪಂದ
(C) ಶ್ರೀರಂಗ ಪಟ್ಟಂ ಒಪ್ಪಂದ (D) ಮದ್ರಾಸ್ ಒಪ್ಪಂದ
(E) ಮೈಸೂರು ಒಪ್ಪಂದ

45. ಈ ಕೆಳಗಿನ ಜಿಲ್ಲೆಗಳಲ್ಲಿ ಯಾವುದು ಬೇಸಾಯ ಯೋಗ್ಯ ವಿಸ್ತಾರವಾದ ಕೃಷಿ ಭೂಮಿಯನ್ನು ಹೊಂದಿದೆ ?
(A) ಮಂಡ್ಯ (B) ವಿಜಯಪುರ (C) ಬೆಳಗಾವಿ (D) ಕಲಬುರಗಿ (E) ಬಾಗಲಕೋಟೆ

46. ಕೆಳಗಿನ ನದಿಗಳಲ್ಲಿ ಯಾವುದು/ಯಾವುವು ಪೂರ್ವಮುಖ ಹರಿಯುತ್ತಿದೆ/ಹರಿಯುತ್ತಿವೆ ಮತ್ತು ಬಂಗಾಳ ಕೊಲ್ಲಿಯನ್ನು ಸೇರುತ್ತದೆ/ಸೇರುತ್ತವೆ ?
I. ಶರಾವತಿ
II. ಪೆನ್ನರ್
III. ಕುಮಾರಧಾರಾ
IV. ತುಂಗಭದ್ರಾ
V. ಕಾಳೀ

ಕೆಳಗಿನ ಕೋಡ್‌ಗಳ ಮೇರೆಗೆ ಉತ್ತರಿಸಿ :
(A) IV ಮಾತ್ರ (B) III ಮಾತ್ರ (C) II ಮತ್ತು III ಮಾತ್ರ
(D) I, II ಮತ್ತು V ಮಾತ್ರ (E) II ಮತ್ತು IV ಮಾತ್ರ

47. ಅರಣ್ಯ ನರ್ಸರಿಯೊಂದರಲ್ಲಿ ಎಳೆ ಸಸಿಗಳನ್ನು 6 ವಿಭಿನ್ನ ಬ್ಲಾಕ್‌ಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ ಮತ್ತು ಪ್ರತಿಯೊಂದು ಬ್ಲಾಕ್ 75 ಸಾಲುಗಳನ್ನು ಹಾಗೂ 5 ಸ್ತಂಭಾಕೃತಿ (ಕಾಲಂ) ಗಳನ್ನು ಹೊಂದಿರುತ್ತದೆ. ನರ್ಸರಿಯಲ್ಲಿರುವ ಎಳೆ ಸಸಿಗಳ ಸಂಖ್ಯೆ ಎಷ್ಟು?
(A) 3250 (B) 3000 (C) 2750 (D) 2500 (E) 2250

48. ಕರ್ನಾಟಕದಲ್ಲಿ ಜೈನ ಧರ್ಮವನ್ನು ಪ್ರಚುರಪಡಿಸಿದ ಖ್ಯಾತಿ ಯಾರಿಗೆ ಸಲ್ಲುತ್ತದೆ ?
(A) ಅಶೋಕ (B) ಬಿಂಬಿಸಾರ (C) ಚಂದ್ರಗುಪ್ತ ಮೌರ್ಯ
(D) ಸಂಪಾರತಿ (E) ಶಿವಮಾರ – I

49. ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸ 'ಕೃಷ್ಣ ದೇವರಾಯ' ಯಾವ ರಾಜವಂಶಕ್ಕೆ ಸೇರಿದವನಾಗಿದ್ದನು ?
(A) ಸಂಗಮ ರಾಜವಂಶ (B) ಸಾಳುವ ರಾಜವಂಶ (C) ಕದಂಬ ರಾಜವಂಶ
(D) ಅರವೀಡು ರಾಜವಂಶ (E) ತುಳುವ ರಾಜವಂಶ

50. ಶಿಲ್ಪಕಲೆಯ ವೇಸರ ಶೈಲಿಯು ಮೂಲತಃ ಇವರಿಂದ ಪ್ರಾರಂಭಿಸಲ್ಪಟ್ಟಿತು.
(A) ಚಾಲುಕ್ಯರು (B) ವಿಜಯನಗರ ಸಾಮ್ರಾಜ್ಯ (C) ರಾಷ್ಟ್ರಕೂಟರು
(D) ಹೊಯ್ಸಳರು (E) ಶಾತವಾಹನರು



www.kpscvaani.com

Scanned by CamScanner